# ಸಂದೀಪ್ ವಂಗ ಕ್ರೈಮ್ ಡ್ರಾಮಾ

■ ವಿಶಾಖ ಎನ್.



ಸಂದೀಪ್ ರೆಡ್ಡಿ ವಂಗ ಒಂದೇ ಚಿತ್ರವನ್ನು ಎರಡೆರಡು ಭಾಷೆಗಳಲ್ಲಿ ನಿರ್ದೇಶಿಸಿ ಸದ್ದು ಮಾಡಿದವರು. ತೆಲುಗಿನ ‘ಅರ್ಜುನ್ ರೆಡ್ಡಿ’ ತೆರೆಕಂಡ ಮೇಲೆ ಬಂದ ಟೀಕೆಗಳಿಗಿಂತ ಹೆಚ್ಚು ಕಟುವಾಗಿ ಅನೇಕರು ಅವರನ್ನು ಕೆಣಕಿದ್ದು ಹಿಂದಿಯಲ್ಲಿ ‘ಕಬೀರ್ ಸಿಂಗ್’ ಬಂದಮೇಲೆ. ಶಾಹಿದ್ ಕಪೂರ್, ಕಿಯಾರ ಅಡ್ವಾಣಿ ಅಭಿನಯದ ‘ಕಬೀರ್ ಸಿಂಗ್’ ಟೀಕಾಸುರಿಮಳೆಗಳ ಹೊರತಾಗಿಯೂ ಒಳ್ಳೆಯ ಕಲೆಕ್ಷನ್ ಮಾಡಿತು.

ಒಂದೇ ಸಿನಿಮಾವನ್ನು ಸುದೀರ್ಘ ಕಾಲ ಮಾರುಕಟ್ಟೆ ಮಾಡಿಕೊಳ್ಳುವ ಚಾಳಿಯ ನಿರ್ದೇಶಕರ ಯಾದಿಗೆ ಇವರೂ ಸೇರಿಕೊಂಡರೇ, ಮುಂದೆ ಇವರು ಯಾವ ಚಿತ್ರ ನಿರ್ದೇಶಿಸುತ್ತಾರೆ ಎಂಬೆಲ್ಲ ಪ್ರಶ್ನೆಗಳು ಇದ್ದವು. ಅವಕ್ಕೆಲ್ಲ ಉತ್ತರರೂಪದಲ್ಲಿ ಸಂದೀಪ್ ಹೊಸ ಚಿತ್ರವನ್ನು ಘೋಷಿಸಿದ್ದಾರೆ. ರಣಬೀರ್ ಕಪೂರ್, ಅನಿಲ್ ಕಪೂರ್, ಬಾಬ್ಬಿ ದೇವಲ್, ಪರಿಣಿತಿ ಚೋಪ್ರಾ ಹೊಸ ಚಿತ್ರದ ತಾರಾಬಳಗದಲ್ಲಿದ್ದಾರೆ. ‘ಕ್ರೈಮ್ ಡ್ರಾಮಾ’ ಚಿತ್ರಕಥೆಯನ್ನು ಒಳಗೊಂಡ ಸಿನಿಮಾ ಈ ವರ್ಷದ ನಡುಘಟ್ಟದಲ್ಲಿ ತೆರೆಕಾಣಲಿದೆ. ಭೂಷಣ್ ಕುಮಾರ್, ಕೃಷ್ಣ ಕುಮಾರ್ ಹಾಗೂ ಪ್ರಣಯ್ ರೆಡ್ಡಿ ವಂಗ ಹೊಸ ಚಿತ್ರಕ್ಕೆ ಬಂಡವಾಳ ಹೂಡಲಿದ್ದಾರೆ.

ಧಾರವಾಡದ ಎಸ್‌ಡಿಎಂ ಕಾಲೇಜಿನಲ್ಲಿ ಫಿಸಿಯೊಥೆರಪಿಯಲ್ಲಿ ಪದವಿ ಪಡೆದ ಮೇಲೆ ಸಿನಿಮಾ ಮೋಹಕ್ಕೆ ಸಿಲುಕಿ ಸಿಡ್ನಿಯ ಇಂಟರ್‌ನ್ಯಾಷನಲ್ ಫಿಲ್ಮ್ ಸ್ಕೂಲ್‌ನಲ್ಲಿ ಕಲಿತು ಬಂದವರು ಸಂದೀಪ್ ರೆಡ್ಡಿ ವಂಗ. ತಮ್ಮ ಚಿತ್ರಶಿಲ್ಪದ ಕೌಶಲದ ಕುರಿತು ಅವರಿಗೆ ಇರುವ ಆತ್ಮವಿಶ್ವಾಸ ದೊಡ್ಡದು. ಸುಮಾರು 60 ಕೋಟಿ ರೂಪಾಯಿ ಬಜೆಟ್‌ನಲ್ಲಿ ಸಿದ್ಧಗೊಂಡಿದ್ದ ‘ಕಬೀರ್ ಸಿಂಗ್’ 350 ಕೋಟಿ ರೂಪಾಯಿಗಿಂತ ಹೆಚ್ಚು ಹಣವನ್ನು ಗಳಿಸಿತು. ಹೀಗಾಗಿ ಮತ್ತೆ ಅದೇ ಚಿತ್ರದ ನಿರ್ಮಾಪಕರಾದ ಭೂಷಣ್ ಕುಮಾರ್, ಕೃಷ್ಣ ಕುಮಾರ್ ಹಣ ಹೂಡಲು ಮುಂದೆ ಬಂದಿದ್ದಾರೆ. ರಣಬೀರ್ ಹಾಗೂ ಅನಿಲ್ ಕಪೂರ್ ಈ ಚಿತ್ರದ ಕುರಿತು ಹೆಚ್ಚೇ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ■

# ಸೋಲಿನ ನೆರಳಲ್ಲೂ ಸಾರಾ ಖುಷಿ




ಸಾರಾ ಅಲಿ ಖಾನ್ ಕಡೆಗೆ ವಿಮರ್ಶಕರು ವಾರೆಗಣ್ಣಿನಿಂದ ನೋಡುತ್ತಿದ್ದಾರೆ. ‘ಕೂಲಿ ನಂ.1’ ಚಿತ್ರ ಮಕಾಡೆಯಾಗಿದೆ. ಒಟಿಟಿಯಲ್ಲಿ ಅದನ್ನು ನೋಡಿ ತೆಗಳಿದವರೇ ಹೆಚ್ಚು. ಆ ನೋವಿನಲ್ಲಿ ಅವರು ನಲುಗಿದ್ದಾರೇನೋ ಅಂದುಕೊಳ್ಳುತ್ತಿದ್ದರೆ, ವಸ್ತುಸ್ಥಿತಿ ಹಾಗಿಲ್ಲ. ಅವರೀಗ ‘ಅತರಂಗಿ ರೇ’ ಸಿನಿಮಾ ಚಿತ್ರೀಕರಣದ ಖುಷಿಯಲ್ಲಿದ್ದಾರೆ. ಅಕ್ಷಯ್ ಕುಮಾರ್ ಹಾಗೂ ಧನುಷ್ ಜತೆ ಈ ಚಿತ್ರದಲ್ಲಿ ಅವರು ತೆರೆಹಂಚಿಕೊಳ್ಳುತ್ತಿದ್ದಾರೆ. ಅವರ ಪಾತ್ರವೇ ಸಿನಿಮಾದಲ್ಲಿ ಪ್ರಧಾನ.

‘ನನಗೀಗ ದುರಾಸೆ ಬಂದಿದೆ. ಒಳ್ಳೆಯ ಸಿನಿಮಾಗಳಲ್ಲೆಲ್ಲ ನಾನು ಕಾಣಿಸಿಕೊಳ್ಳಬೇಕು ಎನಿಸತೊಡಗಿದೆ. ಸಣ್ಣ ಪಾತ್ರವಿರಲಿ, ದೊಡ್ಡ ಪಾತ್ರವಿರಲಿ ಚಿಂತೆ ಇಲ್ಲ. ಇವತ್ತು ಬರೀ ಕಮರ್ಷಿಯಲ್ ಚಿತ್ರಗಳಲ್ಲಿ ನಟಿಸಿ, ಆಮೇಲೆ ಸೀರಿಯಸ್ ಪಾತ್ರಗಳನ್ನು ಮಾಡುವೆ ಎಂಬ ಜಾಯಮಾನ ನನ್ನದಲ್ಲ. ಕಥೆ ಹೇಳುವವರು ಬಂದಾಗ, ಅದರಲ್ಲಿ ನಾನು ಕೇಳುವಂತಹ ಆಸಕ್ತಿಕರ ವಿಷಯ ಇದ್ದರಷ್ಟೆ ಸಾಕು. ಆ ನಂಬಿಕೆಯಿಂದಲೇ ಸ್ಕ್ರಿಪ್ಟ್‌ಗಳನ್ನು ಆರಿಸಿಕೊಳ್ಳುತ್ತಿದ್ದೇನೆ’ ಎನ್ನುವ ಸಾರಾ ಈಗಲೇ ‘ಕೂಲಿ ನಂ. 1’ ಚಿತ್ರದ ಪೋಸ್ಟ್‌ಮಾರ್ಟಂ ಮಾಡಲು ತಯಾರಿಲ್ಲ.

ಚಿತ್ರರಂಗ ಕ್ರಮೇಣ ಮಹಿಳಾಪ್ರಧಾನ ಚಿತ್ರಗಳತ್ತ ಆಸಕ್ತಿ ತಳೆಯುತ್ತಿರುವುದನ್ನು ಹಣ್ಣು ಮಾಡಿಕೊಂಡು, ತಾವೂ ದೊಡ್ಡ ನಟಿಯಾಗಬೇಕು ಎಂಬ ಗುರಿಯನ್ನು ಸಾರಾ ಕೂಡ ಇಟ್ಟುಕೊಂಡಿದ್ದಾರೆ.

ಆನಂದ್ ಎಲ್. ರಾಯ್ ನಿರ್ದೇಶನದ ‘ಅತರಂಗಿ ರೇ’ಗೆ ಹಿಮಾಂಶು ಶರ್ಮ ಚಿತ್ರಕಥೆ ಬರೆದಿದ್ದಾರೆ. ಇದೇ ನಿರ್ದೇಶಕರ ‘ರಾಂಝಣಾ’ ಚಿತ್ರದ ಹಾಡುಗಳಿಗೆ ಸ್ವರ ಸಂಯೋಜನೆ ಮಾಡಿದ ಎ.ಆರ್. ರೆಹಮಾನ್ ಈ ಸಿನಿಮಾದ ಗೀತೆಗಳಿಗೂ ಮಟ್ಟು ಹಾಕಲಿದ್ದಾರೆ. ನಿರ್ದೇಶಕರ ಕಸುವು ನೆಚ್ಚಿಕೊಂಡಿರುವ ಸಾರಾ ಖುಷಿಗೆ ಸದ್ಯಕ್ಕಂತೂ ಅರ್ಥವಿದೆ. ■